ನ್ಯಾಯಾಲಯದ ಅನುಮತಿ ಮೇರೆಗೆ ಇಂದು ದಿ.27-09-2023 ರಂದು ಸಾಕ್ಷಿಯನ್ನುಪುನಃ ಕರೆಸಿ ಪ್ರಮಾಣಿಕರಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ- ಅರ್ಜಿದಾರರ ಪರ ಶ್ರೀ ಎ.ಎಸ್. ವೈ ವಕೀಲರಿಂದ.

ನನ್ನ ಜಮೀನಿನ ಪಹಣಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ.1 ಎಂದು ಗುರುತಿಸಲಾಯಿತು. ನನ್ನ ಜಮೀನಿನ ಮ್ಯುಟೇಶನ್ ಹಾಜರುಪಡಿಸಿದ್ದು, ಅದನ್ನು ನಿಪಿ.2 ಎಂದು ಗುರುತಿಸಲಾಯಿತು. ಅವಾರ್ಡ್ ನೋಟೀಸಿನ ಹಾಜರುಪಡಿಸಿದ್ದು, ಅದನ್ನು ನಿಪಿ.3 ಎಂದು ಗುರುತಿಸಲಾಯಿತು.

ಪಾಟೀಸವಾಲುಃ- 1 ಎದುರುದಾರರ ಪರ ಡಿ ಜಿ ಪಿ ರವರಿಂದ .

ನನಗೆ ಸೇರಿದ 00.33.04 ಗುಂಟೆ ಜಮೀನು ಭೂ ಸ್ವಾಧೀನಕ್ಕೆ ಒಳಪಟ್ಟಿರುತ್ತೆನೆ. ಭೂ ಸ್ವಾಧೀನಕ್ಕೆ ಒಳಪಟ್ಟ ಕೂಡಲೇ ಅಧಿಕಾರಿಗಳು ನನ್ನ ಜಮೀನಿಗೆ ಭೇಟ್ಟಿ ಕೊಟ್ಟಿದ್ದರು ಎನ್ನುವುದು ಸರಿ. ಜಮೀನಿನಲ್ಲಿ ಬೆಳೆಯುವ ಬೆಳೆಯ ಆಧಾರದ ಮೇಲೆ ಮತ್ತು ಮಣ್ಣಿನ ಫಲವತ್ತತೆಯ ಮೇರೆಗೆ ಪರಿಹಾರ ನೀಡಿದ್ದಾರೆ ಎಂದರೆ - ಸಾಕ್ಷಿ ನೀಡಿದ್ದಾರೆ, ಆದರೆ ಕಡಿಮೆಯಾಗಿದೆ ಎಂದು ನುಡಿದಿದ್ದಾರೆ. ಸಬ್ ರಜಿಸ್ಟರ್ ರವರ ಮೌಲ್ಯದ ಆಧಾರದ ಮೇಲೆ ಪರಿಹಾರ ನೀಡಿದ್ದಾರೆ ಎಂದರೆ ಹೆಚ್ಚಿಗೆ ನೀಡಬೇಕಾಗಿತ್ತು ಎಂದು ನುಡಿದಿದ್ದಾರೆ. ನಾನು ಈಗಾಗಲೇ ರೂ.73,14,058/- ಪರಿಹಾರ ಪಡೆದಿದ್ದೇನೆ. ಪರಿಹಾರ ಪಡೆಯುವ ಸಮಯದಲ್ಲಿ ಕಡಿಮೆಯಾಗಿದೆ ಎಂದು ಅರ್ಜಿ ಕೊಟ್ಟಿರುತ್ತೇನೆ. ಅರ್ಜಿಕಾಪಿಯನ್ನು ಹಾಜರುಪಡಿಸಿಲ್ಲ. ಪಹಣಿ ಪ್ರಕಾರ ನನ್ನ ಜಮೀನು ಖುಶ್ಕಿ ಜಮೀನು ಎಂದು ನಮೂದಾಗಿದೆ ಎನ್ನುವುದು ಸರಿ. ನನ್ನ ಜಮೀನಿನಲ್ಲಿ ಮೆಕ್ಕೆ ಜೋಳ , ಶೇಂಗಾ , ಸೂರ್ಯ ಕಾಂತಿ ಮತ್ತು ಕಬ್ಬು ಬೆಳೆಯುತ್ತಿದ್ದೆ ಎನ್ನುವ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ನನ್ನ ಊರಿನಿಂದ ಬುಳ್ಳಾ ಪುರ ಗ್ರಾಮ ಅರ್ಧ ಕಿ.ಮೀ ಅಂತರದಲ್ಲಿದೆ. ಜಮೀನಿನ ಮಣ್ಣಿನ ಫಲವತ್ತತೆ ಬೇರೆ ನಮ್ಮ ಊರಿನ ಫಲವತ್ತತೆ ಬೇರೆ ಎನ್ನುವುದು ಸರಿಯಲ್ಲ. ನನ್ನ ಜಮೀನಿನ ಮೌಲ್ಯವೇ ಬೇರೆ , ನಮ್ಮ ಊರಿನ ಜಮೀನಿನ ಮೌಲ್ಯವೇ ಬೇರೆ ಎನ್ನುವುದು ಸರಿಯಲ್ಲ.

ನನ್ನ ಜಮೀನಿನಲ್ಲಿ ತೋಟಗಾರಿಕೆ ಬೆಳೆ ಬೆಳೆಯುತ್ತಿದ್ದೆ ಎನ್ನುವದಕ್ಕೆ ದಾಖಲೆ ಹಾಜರುಪಡಿಸಿಲ್ಲ. ತೋಟಗಾರಿಕೆ ಇಲಾಖೆಯಿಂದ ಯಾವುದೇ ದಾಖಲೆ ಪಡೆದು

ಹಾಜರುಪಡಿಸಿರುವುದಿಲ್ಲ. ಈಗಾಗಲೇ ನನಗೆ ಸೂಕ್ತ ಪರಿಹಾರ ಕೊಟ್ಟಿದ್ದಾರೆ ಎನ್ನುವುದು ಸರಿಯಲ್ಲ. ಹೆಚ್ಚಿನ ಪರಿಹಾರ ಪಡೆಯಲು ನಾನು ಅರ್ಹನಲ್ಲ ಎನ್ನುವುದು ಸರಿಯಲ್ಲ.

<u>ಪಾಟೀಸವಾಲುಃ-</u> 2 ಎದುರುದಾರರ ಪರ ಶ್ರೀ ಎ ಸಿ ಆರ್ ವಕೀಲರಿಂದ.

ಶ್ರೀ ಎ.ಸಿ.ಆರ್. ವಕೀಲರು 1 ನೇ ಎದುರುದಾರರ ಪರ ವಕೀಲರು ಮಾಡಿದ ಪಾಟೀಸವಾಲನ್ನು ಅನುಮೋದಿಸುತ್ತೇನೆ ಎಂದು ತಿಳಿಸಿರುತ್ತಾರೆ.

<u>ಮರು ವಿಚಾರಣೆಃ-</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.